ಅಧ್ಯಕ್ಷರು.—ನಿಯಮ ೩೩೪ರ ಕೆಳಗೆ ಹೆಚ್ಚಿನ ಚರ್ಚೆಗೆ ಅವಕಾಶ ಇರುವುದಿಲ್ಲ ಎಂದು ಹೇಳಿದ್ದೇನೆ. ಮಾನ್ಯ ವಿನಯಕುಮಾರ್ ಸೊರಕೆಯವರು ಬೇಕಾದರೆ ನಾಳೆ ಇನ್ನೊಂದು ೩೩೪ರ ಕೆಳಗೆ ಕೊಡಬಹುದು. ಈಗ ಎಲ್ಲರೂ ಕುಳಿತುಕೊಳ್ಳಬೇಕು. ಯಾರೂ ಬೇರೆಯವರು ಮಾತನಾಡಿದುದು ರೆಕಾರ್ಡ್‌ಗೆ ಹೋಗುವುದಿಲ್ಲ...

ಶ್ರೀ ಕೆ. ವಸಂತ ಬಂಗೇರ.—ಈ ವಿಷಯವನ್ನು ನಾನು ಕೇಳಿದುದು. ನನಗೆ ಸರಿಯಾದ ಉತ್ತರ ಬೇಕು...

ಅಧ್ಯಕ್ಷರು.—ತಾವು ಕುಳಿತುಕೊಳ್ಳಬೇಕು. ಮುಂದಿನ ನಿಯಮ ೩೩೪ರ ಪ್ರಕಾರ ಮನೋರಮ ಮಧ್ವರಾಜ್‌ರವರು ಓದಬಹುದು.

೯. ರಾಜ್ಯದಲ್ಲಿ ಅನಾಥಾಶ್ರಮಗಳಿಂದ ಹೊರಬಂದವರಿಗೆ ಸರ್ಕಾರದಲ್ಲಿ ಹುದ್ದೆಗಳ ಮೀಸಲಾತಿಯ ಬಗ್ಗೆ.

ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—"ರಾಜ್ಯದಲ್ಲಿ ಅನೇಕ ಅನಾಥಾಶ್ರಮಗಳನ್ನು, ಧಾರ್ಮಿಕ ಸಂಸ್ಥೆಗಳು ಹಾಗೂ ಸಾಮಾಜಿಕ ಸಂಸ್ಥೆಗಳು ನಡೆಸುತ್ತಿದ್ದು, ಅಲ್ಲಿನ ಅನಾಥ ಮಕ್ಕಳು ಯಾವ ಜಾತಿ ಅಥವಾ ಮತಕ್ಕೆ ಸೇರಿರುವುದಿಲ್ಲ. ಅಲ್ಲದೆ ಅವರಿಗೆ ಯಾವುದೇ ವಿಧವಾದ ಅಂತಸ್ತು (ಸ್ಟೇಟಸ್) ಇರುವುದಿಲ್ಲ. ಈ ಸಂಸ್ಥೆಗಳಿಂದ ಹೊರ ಬರತಕ್ಕ ಅವರಿಗೆ ನೆಲೆಯಾಗಲೀ, ಜೀವನಾಧಾರವಾಗಲೀ ಇಲ್ಲದಿದ್ದು, ಅವರು ನೀರಿನಿಂದ ಹೊರ ಬಂದ ಮೀನಿನಂತಾಗುತ್ತಾರೆ. ಇಂತಹ ಅನಾಥರಿಗಾಗಿ ಮಹಾರಾಷ್ಟ್ರದ ರಾಜ್ಯ ಸರಕಾರದಲ್ಲಿ ನೌಕರಿ ಪಡೆದು ಕೊಳ್ಳುವ ಸಲುವಾಗಿ ಕೆಲವು ಹುದ್ದೆಗಳನ್ನು ಮೀಸಲಾಗಿಡಲಾಗಿದೆ ಇವರು ದೇಶದ ಮುಂದಿನ ಪ್ರಜೆಗಳಾಗಿರುವುದರಿಂದ ಅವರಿಗೆ ನೌಕರಿ ಒದಗಿಸುವುದಲ್ಲದೆ ನೆಲೆಯನ್ನೂ ಒದಗಿಸುವುದು ಸರಕಾರದವರ ಆದ್ಯಕರ್ತವ್ಯವಾಗಿದೆ. ಮಂಗಳೂರಿನ ಸ್ವಾಮಿ ಶ್ರದ್ಧಾನಂದ ಸೇವಾಶ್ರಮವೂ ಸಹ ಇಂತಹ ಅನಾಥ ಮಕ್ಕಳ ಸಂಸ್ಥೆಯಾಗಿದ್ದು ಅಲ್ಲಿಂದ ಹೊರಬಂದ ಅನೇಕರು ಇಡೀ ದೇಶದಲ್ಲಿ ದೇಶದ ಸೇವೆ ಮಾಡುತ್ತಿರುವುದಲ್ಲದೆ ಪರದೇಶಗಳಲ್ಲಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಆದ್ದರಿಂದ ಇಂತಹ ಸಂಸ್ಥೆಗಳಿಂದ ಬರತಕ್ಕ ಯುವಕ ಯುವತಿಯರಿಗಾಗಿ ಸರಕಾರದ ಹುದ್ದೆಗಳಲ್ಲಿ ಹಾಗೂ ಅರೆ ಸರಕಾರಿ ಉದ್ದಿಮೆಗಳಲ್ಲಿ ಹುದ್ದೆಗಳನ್ನು ಮೀಸಲಿಡುವ ಮೂಲಕ ಅನಾಥ ಮಕ್ಕಳ ಕಲ್ಯಾಣ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳ ಪರವಾಗಿ).—ಅಧ್ಯಕ್ಷರೇ, ಈ ವಿಚಾರವಾಗಿ ಸದರಿ ಶ್ರದ್ಧಾನಂದ ಆಶ್ರಮದವರು ಮತ್ತು ಸನ್ಮಾನ್ಯ ಸದಸ್ಯೆಯವರು ಸಂಬಂಧಪಟ್ಟ ಮಾನ್ಯ ಮಂತ್ರಿಯವರಿಗೆ ಈಗಾಗಲೇ ಮನವಿಯನ್ನು ಕಳುಹಿಸಿದ್ದಾರೆ. ಈಗ ಇಲ್ಲಿ ನಾನು ಮಂತ್ರಿಗಳ ಪರವಾಗಿ ನೇರವಾಗಿ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳ ಗಮನಕ್ಕೆ ವಿಷಯವನ್ನು ತಂದು, ಉತ್ತರವನ್ನು ತರಿಸಿಕೊಡುತ್ತೇನೆ.

೧೦. ಬೈಂದೂರಿನ ಸರ್ಕಾರಿ ಪ್ರಾಥಮಿಕ ದರ್ಜೆ ಕಾಲೇಜಿನ ಕಟ್ಟಡವನ್ನು ಕೂಡಲೇ ಪ್ರಾರಂಭಿಸುವುದು.

ಶ್ರೀ ಜಿ. ಎಸ್ ಆಚಾರ್.—"ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ಪ್ರಥಮ ದರ್ಜೆಯ ಸರಕಾರಿ ಕಾಲೇಜು. ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ನಡೆಯುತ್ತಿದೆ. ಅನೇಕ ವರ್ಷಗಳಿಂದ ಈ ಪರಿಸ್ಥಿತಿ ಇದ್ದು, ಉಭಯ ಸಂಸ್ಥೆಗಳಿಗೂ ಇದರಿಂದ ತೊಂದರೆಯಾಗಿದೆ. ಸರಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ಕಟ್ಟಿಸಲು ಸರಕಾರವನ್ನು ಒತ್ತಾಯಿಸಿದಾಗ, ೧೯೮೬-೮೭ರಲ್ಲಿ ಕಟ್ಟಿಸಲು ಸೂಕ್ತ ಕ್ರಮಕೈಕೊಳ್ಳುವುದಾಗಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಆಶ್ವಾಸನೆ ನೀಡಿದ್ದರು. ಆಯವ್ಯಯ ಪಟ್ಟಿಯಲ್ಲಿ ಸಹಾ ಹಣ ಕಾದಿರಿಸಲಾಯಿತು. ಶಂಕುಸ್ಥಾಪನೆಗೆ ದಿನ ಕೂಡ ನಿಗದಿ ಪಡಿಸಲಾಯಿತು. ಆದರೆ ಸಮಾರಂಭ ಮುಂದೂಡಲ್ಪಟ್ಟಿತು. ಕಟ್ಟಡದ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಎರಡೂ ವಿದ್ಯಾಸಂಸ್ಥೆಗಳಲ್ಲಿ ತೊಂದರೆ ಮುಂದುವರಿಯುತ್ತಲೇ ಇದೆ. ಬೈಂದೂರ ಪ್ರಥಮ ದರ್ಜೆ ಸರಕಾರಿ ಕಾಲೇಜಿನ ಕಟ್ಟಡ ರಚನಾ ಕಾರ್ಯ ಕೂಡಲೇ ಪ್ರಾರಂಭಿಸಬೇಕೆಂದು ಮರಳಿ ನಾನು ಒತ್ತಾಯಿಸುತ್ತೇನೆ.